## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ

**ಸಿ.ಸಿ ನಂ. 2134/2022** ಸಿ.ಡಬ್ಲ್ಯೂ -1

ಪಿ.ಡಬ್ಲ್ಯೂ -3

| | | |
|---|---|---|
| ಹೆಸರು | : | ಬಸವಂತರಾವ |
| ತಂದೆ:ಗಂಡ | : | ಮಹಾಂತಗೌಡ |
| ವಯಸ್ಸು | : | 37 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮೋಘಾ(ಕೆ) |

ದಿನಾಂಕ:05.09.2023

ಸತ್ಯ ಪ್ರತಿಜ್ಞೆಯ ಮೇರೆಗೆ.

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ :**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-2, 3, 6, 7, 8 ರವರ ಪರಿಚಯ ಇರುತ್ತದೆ. ಚಾಸಾ-9, 10 ರವರು ನನ್ನ ಅಣ್ಣ, ಚಾಸಾ-11 ರಿಂದ 16 ರವರ ಪರಿಚಯ ಇರುವುದಿಲ್ಲ.

ದಿ.05.08.2021 ರಂದು ಹೊಲದಲ್ಲಿ ಗಳೆ ಹೊಡೆಯುತ್ತಿದ್ದಾಗ ನಾನು ಹಾಗೂ ನನ್ನ ತಂದೆ ಸುಮಾರು 11 ಗಂಟೆಗೆ ಕೇಳಲು ಹೋಗಿದ್ದೆವು. ನನ್ನ ತಂದೆ ಸ್ವಲ್ಪ ಮುಂದೆ ಇದ್ದರು, ಹತ್ತಿರ ಹೋದ ನಂತರ ಮೊದಲು ಕೈಯಿಂದ ಹೊಡೆಯಲು ಪ್ರಾರಂಭಿಸಿದರು, ಬಡಿಗೆಯಿಂದ ಹೊಡೆದು ಮೂಗಿನ ಮೇಲೆ ಮುಷ್ಟಿಯಿಂದ ಹೊಡೆದು ರಕ್ತಗಾಯ ಮಾಡಿರುತ್ತಾರೆ, ನನ್ನ ತಂದೆಯವರಿಗೆ ಬಡಿಗೆ ತೆಗೆದುಕೊಂಡು ಒಡಾಡಿಸಿ ಹೊಡೆಯುತ್ತಿದ್ದರು, ನಾನು ಬಿಡಿಸಲು ಹೋದಾಗ ನನ್ನ ಕೈಯ ಮೇಲೆಯೂ ಕಟ್ಟಿಗೆಯಿಂದ ಹೊಡೆದಿರುತ್ತಾರೆ. ಕೈ ಬಾವು ಬಂದಿತ್ತು. ನನಗೂ ಒಡಾಡಿಸಿ ಹೊಡೆದರು. ಚಾಸಾ-9 ರವರು ಅಲ್ಲಿಗೆ ಬಂದರು. ಅವರಿಗೂ ತೊಡೆಯ ಮೇಲೆ ಹೊಡೆದು ಅವಾಚ್ಯ ಶಬದಗಳಿಂದ ಬೈದರು ಹಾಗೂ 1 ನೇ ಆರೋಪಿ ಬಲಗಾಲಿನ ಚಪ್ಪಲಿಯಿಂದ ತಲೆಯ ಮೇಲೆ ಹೊಡೆದನು. ನಂತರ ಚಾಸಾ-10 ರವರು ಬಂದರು. ಅವರಿಗೂ ಸಹ ಅವಾಚ್ಯವಾಗಿ ಬೈದಿರುತ್ತಾರೆ. ಇನ್ನೊಂದು ಬಾರಿ ಈ ಕಡೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ನನ್ನನ್ನು ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. 9 ನೇ ತಾರೀಖಿನಂದು ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ ನಂತರ ಮನೆಯವರೊಂದಿಗೆ ವಿಚಾರಣೆ ಮಾಡಿ 10 ನೇ ತಾರಿಖಿನಂದು ದೂರು ನೀಡಿರುತ್ತೇನೆ. ಸಾಕ್ಷಿಗೆ ಎರಡು ಕಟ್ಟಿಗೆಗಳನ್ನು ತೋರಿಸಿ ಅವುಗಳನ್ನು ಗುರುತಿಸಿದ್ದು ಎರಡು ಕಟ್ಟಿಗೆಗಳನ್ನು ಒಟ್ಟಾಗಿ ಮು.ಮಾ.1 ಎಂದು, ಒಂದು ಎಡಗಾಲಿನ ಚಪ್ಪಲಿಯನ್ನು ತೋರಿಸಿ ಅದನ್ನು ಗುರುತಿಸಿದ್ದು ಚಪ್ಪಲಿಯನ್ನು ಮು.ಮಾ.2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಅವರು ನೀಡಿದ ದೂರನ್ನು ತೋರಿಸಿ ಅವರು ನೀಡಿದ ಹೆಬ್ಬಟ್ಟಿನ ಗುರುತು ಗುರುತಿಸಿದ್ದು ಹೆಬ್ಬಟ್ಟಿನ ಗುರುತನ್ನು ನಿಪಿ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಎ.ಸಿ.ಟಿ. ವಕೀಲರಿಂದ**

2 ನೇ ಆರೋಪಿ ನನ್ನ ಕಾಕಾ, 1 ನೇ ಆರೋಪಿ ಕಾಕಾನ ಮಗ, 2015 ರಲ್ಲಿ ಬಿ.ಆರ್.ಪಾಟೀಲರರು ನಮ್ಮ ಹಾಗೂ ಆರೋಪಿತರ ಹೊಲ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿ. ಆದರೂ ಸಹ ನಮ್ಮ ಮಧ್ಯ ವೈಮನಸ್ಸು ಇದ್ದ ಕಾರಣ ಆಳಂದ ಡಿ.ಎಸ.ಪಿ.ರವರು ಮತ್ತೊಂದು ಬಾರಿ ಹೊಲ ಹಂಚಿಕೆ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಹೊಲದ ಸರ್ವೆ

ನಂ.55 ರಲ್ಲಿ 19 ಎಕರೆ 36 ಗುಂಟೆ ಇದೆಯಾ ಎಂದರೆ ಸರಿ. ಸದರಿ ಆಸ್ತಿ ಪಿತ್ರಾರ್ಜಿತ ಆಸ್ತಿ ಇದ್ದು ಹಂಚಿಕೆ ಆಗಬೇಕು ಎಂದರೆ ಸರಿ. ಸರ್ವೆ ನಂ.67 ರಲ್ಲಿ 12 ಎಕರೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.51 ರಲ್ಲಿ 23 ಎಕರೆ ಆಸ್ತಿ ಇದೆ ಎಂದರೆ ಸಾಕ್ಷಿ ಅದು ಖರೀದಿ ಮಾಡಿದ ಆಸ್ತಿ ಎಂದು ಹೇಳುತ್ತಾರೆ. ಯಾವಾಗ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಕೂಡಿ ಇದ್ದಾಗ ಖರೀದಿ ಮಾಡಿದ ಯಾವುದೇ ಆಸ್ತಿ ಒಟ್ಟು ಕುಟುಂಬಕ್ಕೆ ಸೇರಿರುತ್ತದೆ ಎಂದರೆ ಸರಿಯಲ್ಲ. ಪೂಜಾರಿಯವರಿಂದ ಖರೀದಿಸಿದ 4 ಎಕರೆಯನ್ನು ಆರೋಪಿಗೆ ಪಾಲು ಬರಬೇಕೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.46 ರಲ್ಲಿ 18 ಎಕರೆ ನೀರಾವರಿ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಇದರಲ್ಲಿ 2 ಎಕರೆ ಚಿಲ್ಲರೆ ಗುಂಟೆ ನನ್ನ ತಂದೆ ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸರ್ವೆ ನಂ.45 ರಲ್ಲಿ 7 ಎಕರೆ ನಾನು ಹಾಗೂ ನನ್ನ ಅಣ್ಣ ಖರೀದಿ ಮಾಡಿರುತ್ತೇವೆ. ಹೊಲದ ವಿಚಾರವಾಗಿ ನಮ್ಮ ಮಧ್ಯ ಹಾಗೂ ಆರೋಪಿತರ ಮಧ್ಯ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಎಪಿಎಂಸಿ ಸದಸ್ಯರು ಇದ್ದರು ಎಂದರೆ ಸರಿ. 1 ನೇ ಆರೋಪಿ ಆ ಸಮಯದಲ್ಲಿ ರೂ.5,00,000/- ಗಳನ್ನು ನೀಡಿ ಒಂದು ಪ್ಲಾಟ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪ್ಲಾಟ ಯಾರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮಾಡಿಯಾಳ ಗೌಡಪ್ಪ ಗೌಡ ಪಾಟೀಲ ನನ್ನ ತಾಯಿಯ ಕಡೆಯಿಂದ ಸಂಬಂಧಿಕರು ಎಂದರೆ ಸರಿ. ಗೌಡಪ್ಪ ಹಾಗೂ 1 ನೇ ಆರೋಪಿಯವರು ಪ್ಲಾಟ ಖರೀದಿ ಮಾಡುವಾಗ ಹಣ ಖರ್ಚು ಮಾಡಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಾತ ಬಸವಂತರಾವ ಪಾಟೀಲ ಕುಲಕರ್ಣಿ/ತಲಾಟಿ ಎಂದು ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2 ನೇ ಆರೋಪಿ ನನ್ನ ತಾತರವರ ಪಿಂಚಣಿ ಹಣವನ್ನು ಓಡಾಡಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ಪಿಂಚಣಿ ಹಣ ಮಾಡಿಸಲು ಸುಮಾರು ರೂ.50,000/- ರಿಂದ 60,000/- ಹಣ ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜಿಯ ಹೆಸರಿಗೆ ರೂ. 5,19,000/- ಗಳ ಪಿಂಚಣಿ ಜಾರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜಿ ಸಾಯುವ ಮುನ್ನ ಆರೋಪಿತರೊಂದಿಗೆ ಇದ್ದಳು ಎಂದರೆ ಸಾಕ್ಷಿ ನಮ್ಮ ಹತ್ತಿರ ಸ್ವಲ್ಪ ದಿನ ಇದ್ದಳು ಎಂದು ಹೇಳುತ್ತಾಳೆ. ನನ್ನ ಅಜ್ಜಿ ಆರೋಪಿತರ ಮನೆಗೆ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜಿಯ ಮಣ್ಣಿನ ಖರ್ಚು ನಾವು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಪಿಂಚಣಿ ಹಣಕ್ಕಾಗಿ ನಾವು ಅರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಹೊಡೆದಿರುವುದಿಲ್ಲ, ಬೈದಿರುವುದಿಲ್ಲ ಎಂದರೆ ಸರಿಯಲ್ಲ. ನನಗೂ ನನ್ನ ತಂದೆಯವರಿಗೂ ಮು.ಮಾ.1 ಮತ್ತು 2 ರಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-9, 10 ರವರು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ತಾರಿಖಿನಂದು ಜಗಳವಾದ ನಂತರ ಆಸ್ಪತ್ರೆಗೆ ಹೋಗಿ 10 ತಾರೀಖಿಗೆ ಹೋಗಿ ದೂರನ್ನು ನೀಡಿರುತ್ತೇವೆ. ಆಸ್ಪತ್ರೆಯಲ್ಲಿ ನಾವು ಠಾಣೆಗೆ ಹೋಗಿ ದೂರು ನೀಡುತ್ತೇವೆ ಎಂದು ಹೇಳಿದ ಕಾರಣ ಎಂಎಲಸಿ ದಾಖಲಿಸಿಕೊಂಡಿರುವುದಿಲ್ಲ. ಕಾಮರೆಡ್ಡಿ ಆಸ್ಪತ್ರೆಯಲ್ಲಿ ನನಗೆ ಆಪರೇಷನ ಆಗಿರುತ್ತದೆ. ಕಾಮರೆಡ್ಡಿ ಆಸ್ಪತ್ರೆಯಲ್ಲಿ ಆಪರೇಷನ ಅದ ಬಗ್ಗೆ ದಾಖಲೆಗಳನ್ನು ನೀಡಿರುವುದಿಲ್ಲ. ನಾವು ಮೊದಲು ಇಎಸಐ ಅಸ್ಪತ್ರೆಗೆ ಹೋಗಿ ತುರ್ತು ಚಿಕಿತ್ಸೆ ಪಡೆದು ಫ್ರಾಕ್ಚರ ಆದ ಕಾರಣ ಕಾಮರೆಡ್ಡಿ ಅಸ್ಪತ್ರೆಗೆ ಹೋಗಿರುತ್ತೇವೆ. ಕಾಮರೆಡ್ಡಿ ಅಸ್ಪತ್ರೆಯಲ್ಲಿ ಮೂರು ದಿನಗಳ ಕಾಲ ಇದ್ದೇವು. ದೂರು ನೀಡಿದ ನಂತರ ಪೋಲಿಸರು ನನ್ನನ್ನು ಮತ್ತೇ ಕರೆದಿರುವುದಿಲ್ಲ. ಪೋಲಿಸರಿಗೆ ಮು.ಮಾ.1, 2 ನ್ನು ಆಳಂದದಲ್ಲಿ ಕೊಟ್ಟಿರುತ್ತೇವೆ. ಆರೋಪಿತರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ತೊಂದರೆ ನೀಡಿದರೆ ಹೊಲ ಹಂಚಿಕೆ ಮಾಡುತ್ತಾರೆ ಎಂದು ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.